# ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ

## ಸಿ.ಸಿ. ನಂ : 1043/2020

ಸಾಕ್ಷಿದಾರರ ಹೆಸರು : ರಮೇಶ್ ಪಿಡಬ್ಲ್ಯು:06
ತಂದೆ / ಗಂಡನ ಹೆಸರು : ಚಂದ್ರಪ್ಪ ಸಿಡಬ್ಲ್ಯು:05
ವಯಸ್ಸು : 43 ವರ್ಷ
ಉದ್ಯೋಗ : ಪೈಂಟ್ ಕೆಲಸ
ವಾಸಸ್ಥಳ : ದೊಗ್ಗನಾಳ್ ಗ್ರಾಮ ಪ್ರ.ವ.ಬೋ ದಿ. :12.08.2024

## ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ.ಯವರಿಂದ

ನ್ಯಾಯಾಲಯದ ಮುಂದೆ ಗೈರು ಹಾಜರು ಇರುವ ಆರೋಪಿತರು ನನಗೆ ಗೊತ್ತಿಲ್ಲ. ಚಾ.ಸಾಃ 2 ಮತ್ತು 3 ಗೊತ್ತಿಲ್ಲ. ಚಾಸ.4 ಗೊತ್ತು. ಈ ಪ್ರಕರಣದ ವಿಚಾರಗಳಾವುವು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ ಪಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ಪಂಚನಾಮೆ ಕ್ರಮವನ್ನು ಜರುಗಿಸಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿಯವರು ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು)

## ಪಾಟೀಸವಾಲು : ಮಾನ್ಯ ಎಪಿಪಿಯವರಿಂದ

ದಿನಾಂಕಃ 08.11.2012 ರಂದು ಸಂಜೆ 5.00 ಗಂಟೆ ಸಮಯದಲ್ಲಿ ನಾನು ಮತ್ತು ಚಾ.ಸಾಃ 4 ರವರು ಎನ್.ಜಿ.ಹಳ್ಳಿ ಗೇಟ್ ಬಳಿ ಇರುವಾಗ ಆರೋಪಿತರು ಒಂದು ರಟ್ಟಿನ ಬಾಕ್ಸಿನಲ್ಲಿ ಮಧ್ಯದ ಪೌಚುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ಹೊಳಲ್ಕೆರೆ ಪೊಲೀಸರು ಗೇಟ್ ಬಳಿ ಬಂದು ಅವರನ್ನು ಹಿಡಿದುಕೊಳ್ಳಲು ಹೋದಾಗ ಅವರಿಬ್ಬರು ಮಧ್ಯದ ಬಾಕ್ಸ್‌ಗಳನ್ನು ಅಲ್ಲಿಯೇ ಬಿಟ್ಟು ಜೋಳದ ಹೊಲಕ್ಕೆ ಓಡಿಹೋಗಿ ತಪ್ಪಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪೊಲೀಸರು ನನ್ನ ಮತ್ತು ಚಾಸ.4 ರವರ ಬಳಿ ಅವರ ಹೆಸರು ವಿಳಾಸ ಕೇಳಿದ್ದು, ನಾವು ಆ ಬಗ್ಗೆ ಪೊಲೀಸರಿಗೆ ತಿಳಿಸಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು ರಟ್ಟಿನ ಬಾಕ್ಸ್fನಲ್ಲಿ ಇದ್ದ ಮಧ್ಯದ ಪೌಚುಗಳನ್ನು ಪರಿಶೀಲಿಸಲಾಗಿ ಮಧ್ಯ ತುಂಬಿರುವ 180 ಎಂ.ಎಲ್.ನ 39 ಓಲ್ಡ್ ತವರನ್ ವಿಸ್ಕಿ ಪೌಚುಗಳು ಇದ್ದವು ಎಂದರೆ ಸರಿಯಲ್ಲ,

ಅವುಗಳ ಬೆಲೆ ಸುಮಾರು ರೂ.1950/ ಆಗಿತ್ತು ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಪರವಾನಗಿ ಇಲ್ಲದೆ ಮದ್ಯವನ್ನು ಮಾರಾಟ ಮಾಡುತ್ತಿದ್ದರು ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಮತ್ತು ಪಂಚರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಮದ್ಯವನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರನ್ನು ಮತ್ತು ವಶಪಡಿಸಿಕೊಂಡ ಮಾಲುಗಳನ್ನು ಪುನಃ ನೋಡಿದರೆ ಗುರುತಿಸುತ್ತೇನೆಂದು ದಿ.09/11/2012ರಂದು ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 09.11.2012 ರಂದು ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗಳೆದ ಹೇಳಿಕೆಯನ್ನು ನಿಪಿಃ5 ಎಂದು ಗುರುತಿಸಲಾಯಿತು.

ಪಾಟೀಸವಾಲು ಆರೋಪಿ ಪರ ವಕೀಲರಿಂದ ಇರುವುದಿಲ್ಲ

**ಮರು ವಿಚಾರಣೆ ಇಲ್ಲ :**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ